ಮೊರಾರ್ಜಿ ದೇಸಾಯಿ ವಸತಿ ನಿಲಯದ ಮೂಲಭೂತ ಸೌಕರ್ಯಗಳ ಕೊರತೆ

1680 (1818); ಶ್ರೀ ಗೋಪಾಲ ಪೂಜಾರಿ (ಬೈಂದೂರು)

ಅ) ಬೈಂದೂರು ಮೊರಾರ್ಜಿ ದೇಸಾಯಿ ವಸತಿ ನಿಲಯದ ಕಟ್ಟಡ ಪೂರ್ಣಗೊಳ್ಳದೇ ಇರುವುದಕ್ಕೆ ಕಾರಣಗಳೇನು;

ಆ) ಹಾಗಿದ್ದಲ್ಲಿ, ಅಲ್ಲಿರುವ ಮಕ್ಕಳಿಗೆ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಶಿಕ್ಷಕರಿಗೆ ಉಳಿಯಲು ವಸತಿ ಸೌಲಭ್ಯ ಕಲ್ಪಿಸಲಾಗಿದೆಯೇ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ)

ಅ) ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬೈಂದೂರು ತಾಲ್ಲೂಕಿನ ಹರಂಜಾಲು ಗ್ರಾಮದ ಸರ್ವೆ ನಂ: 94 & 118 ರಲ್ಲಿ ವಸತಿ ಶಾಲಾ ಕಾಮಗಾರಿಗಳನ್ನು ಟೆಂಡರ್ ಕರೆದು ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಯ ಗುತ್ತಿಗೆದಾರರು ಒಪ್ಪಂದದ ಕರಾರಿನಂತೆ ದಿನಾಂಕ: 08.09.2013ರಂದು ಕಾಮಗಾರಿಯನ್ನು ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಬೇಕಾಗಿರುತ್ತದೆ. ಆದರೆ ಗುತ್ತಿಗೆ ದಾರರು 10 ತಿಂಗಳು ವಿಳಂಬ ಮಾಡಿರುತ್ತಾರೆ. ಹಾಗೂ ಗುತ್ತಿಗೆ ದಾರರಿಗೆ ಕಾಮಗಾರಿಯನ್ನು ವಿಳಂಬ ಮಾಡಿರುವ ಬಗ್ಗೆ ರೂ. 4.12 ಲಕ್ಷಗಳ ದಂಡ ವಿಧಿಸಲಾಗಿದೆ.

ಆ) ಹೌದು.

ಇ) ಹೊಸ ವಸತಿ ಶಾಲೆ ಕಟ್ಟಡವು ಪೂರ್ಣಗೊಂಡಿದ್ದು ಶಾಲೆಯನ್ನು ಸ್ಥಳಾಂತರಿಗೊಳಿಸಲಾಗಿದ್ದು, ಕಾರ್ಯನಿರ್ವಹಿಸುತ್ತಿದೆ.

ಈ) ಹೊಸ ಶಾಲಾ ಸಂಕೀರ್ಣದಲ್ಲಿ ಶಾಲಾ ಕಟ್ಟಡದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ವಸತಿ ಗೃಹ ಹಾಗೂ ಅಡಿಗೆ ಮನೆ, ಬೋಜನಾ ಶಾಲಾ ಕಟ್ಟಡ ನಿರ್ಮಿಸಲಾಗಿದೆ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಿಸಿರುವುದಿಲ್ಲ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಎರಡನೇ ಹಂತದಲ್ಲಿ ನಿರ್ಮಿಸಲು ಅಂದಾಜುಪಟ್ಟಿ ತಯಾರಿಸಲಾಗುತ್ತಿದೆ.

ಪಡಿತರ ಚೀಟಿಗಳನ್ನು ನವೀಕರಿಸುವುದು

1681 (2625); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

ಅ) ಪಡಿತರ ಚೀಟಿಗಳನ್ನು ಹೊಸದಾಗಿ ಪಡೆಯಲು ಮತ್ತು ಇರುವ ಪಡಿತರ ಚೀಟಿಗಳನ್ನು ನವೀಕರಣ ಮಾಡಲು ಎಸ್.ಎಂ.ಎಸ್. ಮಾಡುವ ಹೊಸ ಪದ್ಧತಿಯನ್ನು ಸರ್ಕಾರ ಜಾರಿಗೆ ತಂದಿದೆಯೇ ಹಾಗೂ ಕಡ್ಡಯ ಗೊಳಿಸಲಾಗಿದೆಯೇ?

ಆ) ಈ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಲ್ಲಿ, ಗ್ರಾಮೀಣ ಪ್ರದೇಶದ ಬಡ ಜನರು ಸರ್ಕಾರದ ಸೌಲಭ್ಯವನ್ನು ಪಡೆಯಲು ಎಸ್ಎಂಎಸ್ ಮಾಡ ಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದ್ದು, ಗ್ರಾಮೀಣ ಜನತೆಗೆ ಮೊಬೈಲ್ ಬಳಸಿ ಎಸ್ಎಂಎಸ್ ಮಾಡುವ ತಂತ್ರಜ್ಞಾನ ಗೊತ್ತಿಲ್ಲದೇ ಇರುವುದರಿಂದ ಜನರು ಪಡಿತರ ಚೀಟಿ ಸೌಲಭ್ಯ ಪಡೆದುಕೊಳ್ಳಲು ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸಾರ್ವಜನಿಕರಿಗೆ ಸರಳ ರೀತಿಯಲ್ಲಿ ಪಡಿತರ ಚೀಟಿ ಸಿಗವಂತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಹೌದು, ಪಡಿತರ ಚೀಟಿಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಅರ್ಜಿದಾರರು ಎಸ್ಎಂಎಸ್ ಮೂಲಕ ಒಂದು ಸುರಕ್ಷತಾ